# ಮನೋನಿಗ್ರಹ



ಎಲ್ಲಾ ಮನಸ್ಸಿನ ಮೇಲೆ ನಿಂತಿದೆ. ಮನಸ್ಸೇ ಬಂಧನಕ್ಕೆ ಕಾರಣ, ಮನಸ್ಸೇ ಮುಕ್ತಿಗೆ ಕಾರಣ. ಮನಸ್ಸಿಗೆ ಯಾವ ಬಣ್ಣ ಕೊಟ್ಟರೆ ಅದು ಆ ಬಣ್ಣ ಧರಿಸುತ್ತದೆ. ಉದಾಹರಣೆಗೆ ಅಗಸನ ಮನೆಯಿಂದ ತಂದ ಬಟ್ಟೆ. ಕೆಂಪು ಬಣ್ಣದಲ್ಲಿ ಅದ್ದಿದರೆ ಕೆಂಪು, ನೀಲಿ ಬಣ್ಣದಲ್ಲಿ ಅದ್ದಿದ್ದರೆ ನೀಲಿ, ಹಳದಿ ಬಣ್ಣದಲ್ಲಿ ಅದ್ದಿದರೆ ಹಳದಿ, ಮತ್ತಾವ ಬಣ್ಣದಲ್ಲಿ ಅದ್ದಿದ್ದರೂ ಆ ಬಣ್ಣ ಧರಿಸುತ್ತದೆ. ನೋಡಿಲ್ಲವೆ, ಒಂದಿಷ್ಟು ಇಂಗ್ಲಿಷು ಓದುವುದಕ್ಕೆ ಕಲಿತುಕೊಂಡಿರಿ ಎಂದರೆ, ನಿಮ್ಮನ್ನು ಹೇಳದೆ ಕೇಳದೆ 'ಕೋಸ್‌ಪಿಸ್' ಎಂಬ ಇಂಗ್ಲಿಷು ಪದಗಳು ನಿಮ್ಮ ಬಾಯಿಂದ ಹೊರ ಬೀಳುವುದನ್ನ? (ಎಲ್ಲರೂ ನಗುತ್ತಾರೆ.) ಬಳಿಕ ಕಾಲಿಗೆ ಬೂಟ್ಸು, ಸಿಳ್ಳು ಹಾಕುತ್ತಾ ಆಲಾಪನೆ ಮಾಡುವುದು ಇವೆಲ್ಲಾ ಬಂದುಬಿಡುತ್ತವೆ. ಇವೆಲ್ಲಾ ಒಂದೇ ಜೊತೆ. ವಿದ್ಯಾವಂತ ಸಂಸ್ಕೃತ ಕಲಿತುಕೊಂಡಿದ್ದೇ ಆದರೆ ಪದೇ ಪದೇ ಸಂಸ್ಕೃತ ಶ್ಲೋಕಗಳನ್ನು ಎತ್ತಿ ಹೇಳುತ್ತಲೇ ಇರುತ್ತಾನೆ. ನೀನು ಕೆಟ್ಟವರೊಡನೆ ಬೆಳೆದರೆ, ನಿನ್ನ ನಡೆನುಡಿ ವ್ಯವಹಾರ ಎಲ್ಲವೂ ಅವರಂತೆ ಆಗಿಬಿಡುತ್ತವೆ; ಭಕ್ತರ ಸಹವಾಸದಲ್ಲಿ ಬೆಳೆದರೆ, ಮನಸ್ಸು ಭಗವಚ್ಚಿಂತನೆ, ಭಗವತ್ಕಥೆ ಇವುಗಳಲ್ಲೇ ನಿರತವಾಗಿರುತ್ತದೆ.

ಮನಸ್ಸೇ ಎಲ್ಲಕ್ಕೂ ಕಾರಣ. ಮನುಷ್ಯನ ಒಂದು ಪಕ್ಕದಲ್ಲಿ ಹೆಂಡತಿ, ಇನ್ನೊಂದು ಪಕ್ಕದಲ್ಲಿ ಮಗಳು. ಒಬ್ಬಳಿಗೆ ಒಂದು ವಿಧದಲ್ಲಿ ಇನ್ನೊಬ್ಬಳಿಗೆ ಇನ್ನೊಂದು ವಿಧದಲ್ಲಿ ಪ್ರೀತಿ ತೋರಿಸುತ್ತಾನೆ. ಆದರೆ ಮನಸ್ಸು ಮಾತ್ರ ಒಂದೇ ಒಂದು.

ಮನಸ್ಸಿನಿಂದಲೇ ಬಂಧನ, ಮನಸ್ಸಿನಿಂದಲೇ ಮುಕ್ತಿ. 'ನಾನು ಮುಕ್ತಪುರುಷ. ಸಂಸಾರದಲ್ಲಿ ಇದ್ದರೆ ತಾನೆ ಏನು, ಅರಣ್ಯದಲ್ಲಿ ಇದ್ದರೆ ತಾನೆ ಏನು, ನನಗೆಲ್ಲಿಯದು ಬಂಧನ? ನಾನು ಭಗವಂತನ ಮಗು; ರಾಜಾಧಿರಾಜನ ಮಗು. ನನಗಾವುದರ ಬಂಧನ?' ಎಂಬುದಾಗಿ ಯಾರು ಸತತ ಚಿಂತಿಸುತ್ತಾನೊ, ಆತ ಮುಕ್ತನಾಗಿ ಬಿಡುತ್ತಾನೆ. ಒಂದು ಪಕ್ಷ ಹಾವೇನಾದರೂ ಕಡಿದರೆ 'ನನ್ನನ್ನು ವಿಷ ಏನೂ ಮಾಡಲಾರದು' ಎಂಬುದಾಗಿ ದೃಢವಾಗಿ ನಂಬಿದರೆ ಆಗ ಅದರಿಂದ ಪಾರಾಗಿ ಬಿಡಬಹುದು. ಹಾಗೆ 'ನಾನು ಬದ್ಧನಲ್ಲ, ಮುಕ್ತ' ಎಂಬುದಾಗಿ ದೃಢವಾಗಿ ನಂಬಿದರೆ ಹಾಗೇ ಆಗಿಬಿಡಬಹುದು – ಮುಕ್ತನೇ ಆಗಿಬಿಡಬಹುದು.

ಕಾಮಕಾಂಚನಗಳ ಮಧ್ಯೆ ಬಹಳ ಕಾಲ ಇದ್ದುದೇ ಆದರೆ, ಅವು ಮನಸ್ಸನ್ನು ಚೆಲ್ಲಾಪಿಲ್ಲಿ ಮಾಡಿಬಿಡುತ್ತವೆ. ಆದ್ದರಿಂದ ಬಹಳ ಎಚ್ಚರಿಕೆಯಿಂದ ಇರಬೇಕು. ಆದರೆ ಸಂನ್ಯಾಸಿಗಳು ಅಷ್ಟೊಂದು ಹೆದರಿಕೊಳ್ಳಬೇಕಾದ್ದೇನಿಲ್ಲ. ನಿಜವಾದ ತ್ಯಾಗಿಗಳು ಕಾಮಕಾಂಚನಗಳಿಂದ ಬಹಳ ದೂರದಲ್ಲೇ ಇರುತ್ತಾರೆ. ಆದ್ದರಿಂದ ಸಾಧನೆಯ ಮೂಲಕ ಆತ ಸರ್ವದಾ ಭಗವಂತನಲ್ಲಿ ತನ್ನ ಮನಸ್ಸನ್ನು ಇಡಬಲ್ಲ.

ಸರ್ವದಾ ಭಗವಂತನಲ್ಲೇ ಮನಸ್ಸನ್ನಿಡಬಲ್ಲ ನಿಜವಾದ ತ್ಯಾಗಿಗಳನ್ನು ಜೇನು ಹುಳುಗಳಿಗೆ ಹೋಲಿಸಬಹುದು. ಅವು ಕೇವಲ ಹೂವುಗಳ ಮೇಲೆ ಇಳಿದು ಮಧುಪಾನ ಮಾಡುತ್ತವೆ. ಯಾರು ಈ ಜಗತ್ತಿನಲ್ಲಿ ಕಾಮಕಾಂಚನಗಳ ಮಧ್ಯೆ ಇರುತ್ತಾರೊ, ಅವರ ತಮ್ಮ ಮನಸ್ಸನ್ನು ಭಗವಂತನ ಕಡೆಗೆ ತಿರುಗಿಸಬಲ್ಲರು. ಆದರೆ ಕೆಲವು ವೇಳೆ ಅವರು ಕಾಮಕಾಂಚನಗಳ ಕಡೆಗೂ ಅದನ್ನು ತಿರುಗಿಸಿಬಿಡುತ್ತಾರೆ. ಅವರು ಈ ಸಾಧಾರಣ ನೊಣಗಳ ಹಾಗೆ. ಅವು ಸಿಹಿ ತಿಂಡಿಗಳ ಮೇಲೂ ಕೂರುತ್ತವೆ, ಕೊಳೆತು ನಾರುವ ಹಣ್ಣುಗಳ ಮೇಲೂ ಕೂರುತ್ತವೆ, ಹೇಸಿಗೆ ಮೇಲೂ ಕೂರುತ್ತವೆ.

ಭಗವಂತನಲ್ಲಿ ಸರ್ವದಾ ಮನಸ್ಸನ್ನಿಡುವ ಮೊದಲು ಸ್ವಲ್ಪ ಶ್ರಮಿಸಬೇಕಾಗುತ್ತದೆ; ಕೊನೆಗೆ ವಿಶ್ರಾಂತಿವೇತನ ದೊರೆಯುತ್ತದೆ.

ಮನುಷ್ಯ ಯಾವ ಮಾರ್ಗ ಬೇಕಾದರೂ ಅನುಸರಿಸಲಿ, ಮನಸ್ಸು ಸ್ಥಿರವಾಗದ ಹೊರತು ಯೋಗ ಸಾಧ್ಯವಾಗುವುದಿಲ್ಲ. ಯೋಗಿಯ ಮನಸ್ಸು ಆತನ ವಶದಲ್ಲಿರುತ್ತದೆಯೇ ವಿನಾ ಆತ ಅದರ ವಶದಲ್ಲಿರುವುದಿಲ್ಲ. ಮನಸ್ಸು ಸ್ಥಿರವಾಯಿತು ಎಂದರೆ, ವಾಯು ಸ್ಥಿರವಾಗುತ್ತದೆ – ಕುಂಭಕವಾಗುತ್ತದೆ.

ಮನಸ್ಸು ಹಾಲು ಇದ್ದ ಹಾಗೆ. ಅದನ್ನು ಸಂಸಾರವೆಂಬ ನೀರಿಗೆ ಸುರಿದರೆ ಅದು ಅದರೊಡನೆ ಬೆರೆತುಕೊಂಡುಬಿಡುತ್ತದೆ. ಜನ ಹಾಲನ್ನು ನಿರ್ಜನಪ್ರದೇಶದಲ್ಲಿ ಇಟ್ಟು ಹೆಪ್ಪುಹಾಕಿ ಮೊಸರು ಮಾಡಿ ಕಡೆದು ಬೆಣ್ಣೆ ತೆಗೆಯುತ್ತಾರೆ. ಹಾಗೇನೇ ನಿರ್ಜನಪ್ರದೇಶದಲ್ಲಿ ಸಾಧನೆಮಾಡಿ ಮನಸ್ಸೆಂಬ ಹಾಲಿನಿಂದ ಜ್ಞಾನ-ಭಕ್ತಿಗಳೆಂಬ ಬೆಣ್ಣೆಯನ್ನು ತೆಗೆಯುವುದಾದರೆ, ಬಳಿಕ ಆ ಬೆಣ್ಣೆಯನ್ನು ಅನಾಯಾಸವಾಗಿ ಸಂಸಾರವೆಂಬ ನೀರಿನಲ್ಲಿ ಇಡಬಹುದು. ಆಗ ಅದು ಎಂದಿಗೂ ಸಂಸಾರವೆಂಬ ನೀರಿನಲ್ಲಿ ಬೆರೆತುಹೋಗುವುದಿಲ್ಲ.

ಶ್ರೀರಾಮಕೃಷ್ಣ ವಚನವೇದದಿಂದ